# ಆಲಿಸುವ ಕೌಶಲವರ್ಧನೆಯಲ್ಲಿ ನಾಟಕಕಲೆ

**ದಿವಾಕರ ಜೆ.[1] & ಶಿವಣ್ಣ ಎಸ್.[2]**

[1]ಸಂಶೋಧನಾ ವಿದ್ಯಾರ್ಥಿ, ಪ್ರದರ್ಶನ ಕಲಾ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

[2]ಸಹಾಯಕ ಪ್ರಾಧ್ಯಾಪಕರು, ಪ್ರದರ್ಶನ ಕಲಾ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

**Received: 19-07-2023 ; Accepted: 01-08-2023 ; Published: 09-05-2024**

**DOI: https://doi.org/10.5281/zenodo.11162027**

## ABSTRACT:

ರಂಗಭೂಮಿಯ ಪ್ರಮುಖ ಕಲೆಯಾದ ನಾಟಕ ಕಲೆಯು ಮಕ್ಕಳಾದಿಯಾಗಿ ದೊಡ್ಡವರಿಗೂ ಕೂಡ ಶಿಕ್ಷಣ, ಮಾಹಿತಿ, ಮನರಂಜನೆಯನ್ನು ನೀಡುತ್ತದೆ. ಈ ನಾಟಕ ಕಲೆಯಲ್ಲಿ ಪಾಲ್ಗೊಂಡ ವ್ಯಕ್ತಿಯ ಮಾತೃ ಭಾಷೆಯ ಪ್ರಯೋಗವು ಸೂಕ್ತವಾಗಿರುತ್ತದೆ. ಇದಕ್ಕೆ ಕಾರಣ ಅವರಲ್ಲಿ ಆಗಿರುವ ಭಾಷೆಯ ವಿಕಾಸ ಮತ್ತು ಬೆಳವಣಿಗೆ ಹಾಗೂ ಭಾಷೆಯ ಕೌಶಲಗಳು. ಈ ಕೌಶಲಗಳನ್ನು ನಾಟಕ ಕಲೆ ಹೇಗೆ ಕಲಿಸುತ್ತದೆ? ಎಂಬ ಪ್ರಶ್ನೆ ಮುಖೇನ ಉತ್ತರ ಹುಡುಕಲು ಈ ಲೇಖನ ಪ್ರಯತ್ನಿಸುತ್ತದೆ. ಕನ್ನಡ ಭಾಷಾ ಕೌಶಲಗಳ ಕಲಿಕೆಯಲ್ಲಿ ನಾಟಕ ಕಲೆ: ಭಾಷೆ ಕಲಿಕೆಯೆಂಬುದು ಮೂಲತಃ ಭಾಷಾ ಕೌಶಲಗಳ ಕಲಿಕೆಯೇ ಆಗಿದೆ. ಭಾಷೆಯ ಪ್ರಬುದ್ಧತೆ ಸಿದ್ದಿಸುವುದು ಹಾಗೂ ಭಾಷಾ ಕೌಶಲಗಳು ಲಭಿಸುವುದು ಭಾಷಾಂಶಗಳ ಪರಿಣಿತಿಯಿಂದ ಮಾತ್ರ. ಭಾಷಾಕಲಿಕೆಯ ಪ್ರಕ್ರಿಯೆಯಲ್ಲಿ ಆಲಿಸುವುದು, ನೋಡುವುದು, ಮಾತನಾಡುವುದು, ಓದುವುದು, ಬರೆಯುವುದು ಮತ್ತು ಆಲೋಚಿಸುವುದು. ಈ ಕೌಶಲಗಳಿಗೆ ಸಂಬಂಧಿಸಿದಂತೆ ಅವಶ್ಯಕವಾದ ಸಾಮರ್ಥ್ಯಗಳನ್ನು ವಿದ್ಯಾರ್ಥಿಗಳಲ್ಲಿ ಪ್ರಜ್ಞಾ ಪೂರ್ವಕವಾಗಿ ಬೆಳಸಬೇಕಾಗುತ್ತದೆ. ಈ ಹಿನ್ನಲೆಯಲ್ಲಿ ಕೌಶಲಗಳನ್ನು ನಾಟಕ ಕಲೆಯಿಂದ ಪರಿಣಾಮಕಾರಿಯಾಗಿ ಕಲಿಯಲು ಸಾಧ್ಯವಿದೆ. ನಾಟಕ ಪ್ರಕ್ರಿಯೆಯಲ್ಲಿ ಪಾಲ್ಗೊಂಡು, ನಾಟಕವನ್ನು ಅಭ್ಯಾಸ ಮಾಡಿದರೆ ತಿಳಿಯುತ್ತದೆ. ಆಲಿಸುವಿಕೆ: ನಾಟಕಗಳನ್ನು ಧ್ವನಿಮುದ್ರಿಸಿ ಮಕ್ಕಳಾದಿಯಾಗಿ ದೊಡ್ಡವರ ವರೆಗೆ ಕೇಳಿಸಿದರೆ ಅವರುಗಳು ಅದರಲ್ಲಿರುವ ಅಕ್ಷರಗಳು, ಪದಗಳು, ಉಚ್ಚಾರ ಮತ್ತು ವಾಕ್ಯಗಳಿಂದ ಹೊರಹೊಮ್ಮುವ ವಾಚ್ಯಾರ್ಥ, ಲಕ್ಷ್ಯಾರ್ಥ, ವ್ಯಂಗ್ಯಾರ್ಥಗಳನ್ನು ಗ್ರಹಿಸಿ, ಆಲಿಸಿದ ನಾಟಕದಲ್ಲಿ ಕಂಡು ಬರುವ ಧ್ವನಿಯ ಏರಿಳಿತ, ವಿವಿಧ ಭಾವಗಳ ಅಭಿವ್ಯಕ್ತಿ, ನಟರ ಇಂಗಿತವನ್ನು ಗುರುತಿಸುತ್ತಾರೆ. ಇದರಿಂದ ಸಹನೆ, ಏಕಾಗ್ರತೆ, ವಿಷಯ ಜೋಡಣೆ, ಮಾತಿನ ಚಮತ್ಕಾರಗಳು, ಪ್ರಶಂಸಾ ಶ್ರವಣ ಜಾಗೃತವಾಗಿ ರಸಗ್ರಹಣವು ತೀಕ್ಷ್ಣಗೊಳ್ಳುತ್ತದೆ. ಏಕೆ ಆಲಿಸಬೇಕು? ಏನನ್ನು ಆಲಿಸಬೇಕು? ಹೇಗೆ ಆಲಿಸಬೇಕು? ಎಂಬ ಔಚಿತ್ಯದಿಂದ ಪ್ರಜ್ಞಾಪೂರ್ವಕವಾಗಿ ಉದ್ದೇಶ ಬದ್ಧವಾಗಿ, ಮಾನಸಿಕ ಸಿದ್ಧತೆ, ಶಿಸ್ತು, ಏಕಾಗ್ರತೆ, ಆಸಕ್ತಿಯಿಂದ ಪ್ರಚೋದಿತರಾಗಿ ಆಲಿಸುವುದಕ್ಕೆ ಒತ್ತು ನೀಡುವುದು ನಾಟಕ ಕಲೆಯಿಂದ ಸಾಧ್ಯವಿದೆ. ಮಾತುಗಾರಿಕೆ: ರಮ್ಯವಾದ ನಾಟಕ ಭಾಗಗಳು ಸ್ಪಷ್ಟವಾದ ಉಚ್ಚಾರದೊಂದಿಗೆ ಭಾವಪೂರ್ಣವಾಗಿ ಓದುವ ಹಾಗೂ

ಮಾತನಾಡುವ ಕೌಶಲವನ್ನು ಬೆಳಸುತ್ತದೆ. ವಿವಿಧ ಉಪಭಾಷೆಗಳ ಅಥವಾ ಆಡುನುಡಿಗಳ ಕಿರುನಾಟಕಗಳನ್ನು ಆಡಿಸುವುದರಿಂದ ಆಯಾ ಪ್ರಾಂತ್ಯದ ಬೇರೆ ಬೇರೆ ಭಾಗಗಳ ಭಾಷೆಗಳ ಪರಿಚಯವಾಗುವುದು. ಇದರಿಂದ ಮನರಂಜನೆಯ ಜೊತೆ ನೈತಿಕ ಮೌಲ್ಯ, ಚಿಂತನೆ, ಮಾತುಗಾರಿಕೆ, ವಾಚನ ಕೌಶಲದ ಉದ್ದೀಪನ, ಪ್ರಚೋದನ ಬದಲಾವಣೆಯ ಕೌಶಲದ ಸಂವರ್ಧನೆಗೂ ವ್ಯಾಪಕವಾದ ಅವಕಾಶ ದೊರೆತು, ಮಕ್ಕಳಲ್ಲಿ ಮಾತುಗಾರಿಕೆಯ ಸಾಮರ್ಥ್ಯವನ್ನು ವ್ಯವಸ್ಥಿತವಾಗಿ ಬೆಳಸಬಹುದು. ಓದುಗಾರಿಕೆ: ನಾಟಕದಲ್ಲಿ ಪ್ರಮುಖವಾಗಿ ಸಂಭಾಷಣೆ ಮುಖ್ಯ. ಈ ಸಂಭಾಷಣೆಗೆ ಒಂದು ಭಾಷೆ ಬೇಕು. ಮತ್ತು ವ್ಯಕ್ತಿ ಬೇಕು. ಇವೆರಡು ಸಂಧಿಸುವುದು ನಾಟಕದ ಕ್ರಿಯೆಯಲ್ಲಿ. ಸ್ಪಷ್ಟ ಉಚ್ಚಾರ, ಸೂಕ್ತ ಸ್ವರಭಾರ, ಧ್ವನಿ ನಿಯಂತ್ರಣ, ಸೂಕ್ತವೇಗ, ನಿಲುಗಡೆ, ಸಾಂದರ್ಭಿಕ ಧ್ವನಿ ಏರಿಳಿತ, ಲೇಖನ ಚಿಹ್ನೆಗಳ ಔಚಿತ್ಯ ಅರಿತು ಓದುವ ಕೌಶಲ ನಾಟಕ ಕಲೆಯ ಕಲಿಕೆಯಿಂದ ಸಾಧ್ಯವಾಗಬಹುದು. ನಾಟಕ ಕಲೆ ಪ್ರಾರಂಭದ ಹಂತದಿಂದ ಪ್ರದರ್ಶನದ ವರೆಗೂ ವಿವಿಧ ರೀತಿಯ ಓದಿನ ಕ್ರಿಯೆ ನಡೆಯುತ್ತಿರುತ್ತದೆ. ಬರವಣಿಗೆ: ನಾಟಕದಲ್ಲಿ ನಡೆಯುವ ಕ್ರಿಯೆಗಳನ್ನು ಬರೆಯಲು ತಿಳಿಸಿ, ಅವರ ವಿವರಣೆಯ ಕೌಶಲವನ್ನು ಎತ್ತರಿಸಬಹುದು. ನಾಟಕಕಾರರು ಬರೆದ ಕೃತಿಗಳಲ್ಲಿ ಸೌಂದರ್ಯ ಪ್ರಜ್ಞೆ, ಕಲಾತ್ಮಕತೆಯನ್ನು ಗುರುತಿಸಲು ತಿಳಿಸಿ, ಅದನ್ನು ಅರ್ಥಮಾಡಿಕೊಂಡು, ಬೇರೊಂದರ ಸನ್ನಿವೇಶದಲ್ಲಿ, ಪ್ರಸಂಗಗಳಲ್ಲಿ ಹೋಲಿಸಿ ಬರೆಸಬಹುದು. ಹಾಗೂ ನಾಟಕ ಕ್ರಿಯೆಯ ಹಂತಗಳಲ್ಲಿ ದೃಶ್ಯ ಮತ್ತು ಚಿತ್ರತ್ವದಲ್ಲಿ ಅವರು ಎಂದರೆ ನಟ ರು ನಟಿಸುತ್ತಿರುವ ವರ್ಣಿಸುತ್ತಿರುವ, ಸಂಭಾಷಣೆಗಳನ್ನು ಗುರುತಿಸಿ ಬರೆಯಲು ತಿಳಿಸಬಹುದು. ಪಾತ್ರಗಳ ಅನುಕರಣೆಯಿಂದ ಸಂಭಾಷಣೆಯ ರಚನೆ, ವರ್ಣನೆ, ವಿಶ್ಲೇಷಣೆ, ವಿಮರ್ಶೆ, ಭಾವಾರ್ಥ ನಿರೂಪಣೆ, ಸಾರ ವಿಸ್ತರಣೆ, ದಿನಚರಿ, ಟಿಪ್ಪಣಿ, ವರದಿ ತಯಾರಿ, ಇನ್ನಿತರ ಬರವಣಿಗೆಯ ಮಾದರಿಗಳನ್ನು ನಾಟಕ ಕಲಿಕೆಯ ಮೂಲಕ ರೂಢಿಸಬಹುದು. ಉಪಸಂಹಾರ: ನಾಟಕ ಕಲೆಯು ನಮ್ಮಲ್ಲಿ ಸೃಜನಶೀಲವಾದ ಆಲೋಚನೆ ಮತ್ತು ಒಳನೋಟಗಳಿಗೆ ರಹದಾರಿ ಯನ್ನು ತೋರಿಸುತ್ತದೆ. ಇದು ನಮ್ಮಲ್ಲಿ ಕ್ರಿಯಾತ್ಮಕವಾದ ವಿಶೇಷ ಕೌಶಲಗಳನ್ನು ಬೆಳೆಸುತ್ತದೆ. ಹಾಗಾಗಿ ಕನ್ನಡ ಭಾಷಾ ಕೌಶಲಗಳ ಕಲಿಕೆಯಲ್ಲಿ ನಾಟಕ ಕಲೆ ಅವಶ್ಯಕವಾಗಿದೆ.

## KEYWORDS:

ವಾಚ್ಯಾರ್ಥ, ಲಕ್ಷ್ಯಾರ್ಥ, ವ್ಯಂಗ್ಯಾರ್ಥ, ಭಾಷಾ ಕೌಶಲ.

ನಮ್ಮನಮ್ಮ ಮನೆಗಳಲ್ಲಿ ಹಿರಿಯರು, ಕಿರಿಯರಿಗೆ “ನಾ ಹೇಳಿದ್ದು ಸರಿಯಾಗಿ ಕೇಳ್ತೆ?” ಎಂತಲೂ, ಶಾಲೆಯಲ್ಲಿ ಶಿಕ್ಷಕರು, ವಿದ್ಯಾರ್ಥಿಗಳಿಗೆ “ಮಕ್ಕಳೇ, ಸರಿಯಾಗಿ ಕೇಳಿಸಿಕೊಳ್ಳಿ” ಎಂತಲೂ, ಊರಿನ ಪ್ರಮುಖ ರಸ್ತೆಗಳಲ್ಲಿ ಡಂಗುರದವ “ಕೇಳ್ರಪ್ಪೋ... ಕೇಳೀ...” ಎಂತಲೂ, ನಾಟಕಗಳಲ್ಲಿ ಭೀಮನ ಪಾತ್ರಧಾರಿ ತನ್ನ ಹೆಂಡತಿ ದ್ರೌಪದಿಗೆ

"ಕಾಂತೆ, ಚೆನ್ನಾಗಿ ಕೇಳು" ಎಂದು ಹೇಳಿರುವುದನ್ನು ಕೇಳಿರುತ್ತೇವೆ. ಇನ್ನಿತರ ಸಂದರ್ಭಗಳಲ್ಲಿ "ಎಚ್ಚರಿಕೆಯಿಂದ ಕೇಳಿಸಿಕೊಳ್ಳಿ", "ಕಿವಿಗೊಟ್ಟು ಕೇಳಿಸಿಕೊಳ್ಳಿ", ಎಂಬ ಸೂಚನೆಗಳ ಜೊತೆಗೆ ರೇಡಿಯೋ, ಟಿವಿಗಳಲ್ಲಿ ಬರುವ ಕಾರ್ಯಕ್ರಮಗಳನ್ನು ಕೇಳಿಸಿಕೊಳ್ಳುತ್ತಾ ನೋಡಿರುತ್ತೇವೆ. ಈ ಎಲ್ಲಾ ಸಂದರ್ಭಗಳಲ್ಲಿ ಪ್ರಮುಖವಾಗಿ ಬಂದಿರುವ ಶಬ್ಧ ಅಥವಾ ಪದ 'ಕೇಳಿ' ಎಂದು. ಈ 'ಕೇಳಿ' ಪದ ಆಲಿಸುವಿಕೆಯ ಭಾಗವಾಗಿದೆ. ಭಾಷಾ ಕಲಿಕೆಗೆ ಆಲಿಸುವಿಕೆಯೇ ಮೂಲ. ಉಳಿದೆಲ್ಲಾ ಕೌಶಲಗಳಿಗೂ ಇದು ಬುನಾದಿಯಾಗಿದ್ದು, ಉತ್ತಮ ಅರ್ಥಗ್ರಹಿಕೆಗೆ ಕಾರಣವಾಗುತ್ತದೆ. ಈ ಆಲಿಸುವ ಕೌಶಲವರ್ಧನೆಯಲ್ಲಿ ರಂಗಭೂಮಿಯ ಚಟುವಟಿಕೆಗಳನ್ನು ಹೇಗೆ ಅಳವಡಿಸಿಕೊಳ್ಳಬಹುದೆಂದು ಈ ಮುಂದಿನಂತೆ ತಿಳಿಯಬಹುದು.

**ಅಧ್ಯಯನದ ಉದ್ದೇಶಗಳು:**

» ಕನ್ನಡ ಭಾಷಾ ಕೌಶಲಗಳಲ್ಲಿ ಒಂದಾದ ಆಲಿಸುವ ಕೌಶಲವರ್ಧನೆಯಲ್ಲಿ ನಾಟಕಕಲೆ ಹೇಗೆ ಪೂರಕವಾಗಿದೆಂಬುದನ್ನು ಕಂಡುಕೊಳ್ಳುವುದು.

» ಆಲಿಸುವ ಕೌಶಲವರ್ಧನೆಗೆ ಯೋಜಿಸಬಹುದಾದ ನಾಟಕಕಲೆಯ ಚಟುವಟಿಕೆಗಳನ್ನು ಪರಿಚಯಿಸುವುದು.

**ಅಧ್ಯಯನದ ವಿಧಾನ:**

ಪ್ರಸ್ತುತ ಲೇಖನವು ಮಾಧ್ಯಮಿಕ ಮೂಲಗಳಿಂದ ಸಂಗ್ರಹಿಸಿದ ಮಾಹಿತಿಯನ್ನು ಬಳಸಿಕೊಳ್ಳಲಾಗಿದೆ. ಭಾಷೆ, ಕನ್ನಡ ಭಾಷಾ ಕೌಶಲಗಳು, ನಾಟಕ ಕಲೆ, ರಂಗ ಪ್ರಯೋಗಕ್ಕೆ ಸಂಬಂಧಿಸಿದ ಸಂಶೋಧನಾ ಲೇಖನ ಪ್ರಬಂಧಗಳು, ಕೃತಿಗಳು, ನಾಟಕ ಕಲೆಯ ವಿಮರ್ಶಾತ್ಮಕ ಲೇಖನಗಳು, ಹಾಗೂ ಅಂತರ್ಜಾಲ ಮೂಲಗಳಿಂದ ಮಾಹಿತಿಯನ್ನು ಸಂಗ್ರಹಿಸಿಕೊಂಡು ವಿಶ್ಲೇಷಣೆ ಮಾಡಲಾಗಿದೆ.

**ಅಧ್ಯಯನದ ಮಹತ್ವ:**

ಶಿಕ್ಷಣ ಕ್ರಮದಲ್ಲಿ ರಂಗಭೂಮಿಯ ತಂತ್ರಗಳನ್ನು ಅಳವಡಿಸುವ ಆಲೋಚನೆಯನ್ನು ಇಂದು ವಿಶ್ವದಾದ್ಯಂತ ಎಲ್ಲ ಶಿಕ್ಷಣ ತಜ್ಞರೂ ತುಂಬು ಹೃದಯದಿಂದ ಸ್ವಾಗತಿಸಿದ್ದಾರೆ. ಶಿಕ್ಷಣದ ದೃಷ್ಟಿಕೋನವು ನಿರಂತರ ಬದಲಾವಣೆಗೊಳಗಾಗುತ್ತಿದ್ದು, ಅದಕ್ಕೆ ಪೂರಕವಾಗಿ ಶಿಕ್ಷಕರನ್ನು ಮತ್ತು ವಿದ್ಯಾರ್ಥಿಗಳನ್ನು ರೂಪಿಸುವಲ್ಲಿ ಶಿಕ್ಷಣ ತಜ್ಞರು, ವಿದ್ವಾಂಸರು, ಕವಿಗಳು, ಕಲಾವಿದರು, ಸಂಶೋಧಕರು, ಸಂಪನ್ಮೂಲ ವ್ಯಕ್ತಿಗಳು ಮತ್ತು ಇನ್ನಿತರ ಮಹನೀಯರ ಪಾತ್ರ ವಿಶೇಷವಾದದ್ದು. ನಾಟಕ ಕಲೆ, ಕೌಶಲಗಳ ಕಲಿಕೆಯಲ್ಲಿ ಉತ್ತಮ ಸಾಧನವಾಗಿದೆ. ಕಲಿಕಾಪ್ರಕ್ರಿಯಲ್ಲಿ

ತೊಡಗಿಸಿಕೊಂಡವರಿಗೆಲ್ಲಾ ರಂಗತರಬೇತಿಯ ಅವಶ್ಯಕತೆ ಹೆಚ್ಚಿದ್ದು, ಶಿಕ್ಷಣದಲ್ಲಿ ನಾಟಕಕಲೆಯನ್ನು ಅಳವಡಿಸಿಕೊಂಡು ಬೋಧನಾಕ್ರಿಯೆ ನಡೆದರೆ ಮಕ್ಕಳ ಕಲಿಕಾ ಸಾಮರ್ಥ್ಯ ಹೆಚ್ಚಾಗಬಹುದು. ಮನರಂಜನೆ, ವಿಷಯಜ್ಞಾನ, ಸೃಜನಶೀಲತೆ, ಭಾಷಾ ಸಾಮರ್ಥ್ಯ, ಸಾಮಾಜಿಕ ಸಂವಹನ, ಕೌಶಲಗಳ ಗಳಿಕೆಯಲ್ಲಿ ನಾಟಕಕಲೆ ಪೂರಕವಾಗಿದ್ದು, ಆಲಿಸುವ ಕೌಶಲವರ್ಧನೆಯಲ್ಲಿ ನಾಟಕ ಕಲೆಯ ಪ್ರಾಯೋಗಿಕ ಚಟುವಟಿಕೆಗಳು ಮಹತ್ವಪೂರ್ಣವಾಗಿವೆ.

**ಆಲಿಸುವ ಕೌಶಲ ಮತ್ತು ನಾಟಕ ಕಲೆ:**

ಇಂಗ್ಲೀಷನ 'ಹಿಯರ್' ಮತ್ತು 'ಲಿಸನ್'ಗೆ ಸಂವಾದಿಯಾಗಿ ಕನ್ನಡದಲ್ಲಿ ಅನುಕ್ರಮವಾಗಿ ಕೇಳುವುದು ಮತ್ತು ಆಲಿಸುವುದು ಎಂಬ ಪರಿಭಾಷೆಗಳನ್ನು ಬಳಸಲಾಗುತ್ತದೆ. ಒಂದರ್ಥದಲ್ಲಿ ಇವೆರಡೂ ಒಂದೇ ಎಂದು ಅನಿಸಿದರೂ ಸೂಕ್ಷ್ಮವಾಗಿ ವಿವೇಚಿಸಿದಾಗ ಎರಡೂ ಬೇರೆ–ಬೇರೆ ಪರಿಕಲ್ಪನೆಗಳೆಂದು ತಿಳಿಯುತ್ತದೆ. ಯಾವುದೇ ಘನ ಉದ್ದೇಶವಿಲ್ಲದೆ ಒತ್ತಡ, ಗುರಿಗಳಿಲ್ಲದೆ, ಮಾಮೂಲಿಯಾಗಿ ನಿಂತು ಕಿವಿ ಮೇಲೆ ಹಾಕಿಕೊಳ್ಳುವ ಧ್ವನಿಗಳು ಕೇಳುವಿಕೆಯ ವ್ಯಾಪ್ತಿಗೆ ಬರುತ್ತವೆ. ಒಂದು ವಿಷಯವನ್ನು ಉದ್ದೇಶಬದ್ಧವಾಗಿ ಕಿವಿಗೊಟ್ಟು ಏಕಾಗ್ರಚಿತ್ತತೆಯಿಂದ ಕೇಳುವುದು ಆಲಿಸುವಿಕೆಯ ವ್ಯಾಪ್ತಿಗೆ ಬರುತ್ತದೆ. ಆಲಿಸುವಿಕೆ ಎಂದರೆ ನಾವು ಕೇಳುವ ಪದ ಅಥವಾ ಶಬ್ದಗಳಲ್ಲಿರುವ ಅರ್ಥ, ಭಾವನೆಗಳನ್ನು ಅರ್ಥೈಸಿಕೊಳ್ಳುವ, ನಮ್ಮ ಪೂರ್ವ ಜ್ಞಾನವನ್ನು ಸಂಬಂಧೀಕರಿಸುತ್ತಾ ನಿರೂಪಿಸುವ, ವ್ಯಾಖ್ಯಾನಿಸುವ, ಪ್ರಜ್ಞಾಪೂರ್ವಕ ಉದ್ದೇಶಬದ್ಧ ಮಾನಸಿಕ ಕ್ರಿಯೆ.

ಈ ಆಲಿಸುವಿಕೆಯು ನಮ್ಮೆಲ್ಲಾ ಸಂಸ್ಕೃತಿಗಳೊಂದಿಗೆ ಮಿಳಿತವಾಗಿದೆ. ನಮ್ಮ ಜನಪದ ಕಾವ್ಯಗಳು, ವೇದೋಪನಿಷತ್ತುಗಳು, ರಾಮಾಯಣ, ಮಹಾಭಾರತ ಮೊದಲಾದ ಮಹಾಕಾವ್ಯಗಳು ಮೌಖಿಕ ಪರಂಪರೆಯಿಂದಲೇ ನಮಗೆ ಹರಿದು ಬಂದಿವೆ. ಮನೋರಂಜನೆ, ವಿಷಯಜ್ಞಾನ ಸೃಜನಶೀಲತೆ, ಭಾಷಾ ಸಾಮರ್ಥ್ಯ, ಸಾಮಾಜಿಕ ಸಂವಹನ, ಸಾಮಾಜಿಕ ಸಂಬಂಧಗಳಲ್ಲಿ ಆಲಿಸುವಿಕೆ ಪ್ರಧಾನವಾಗಿದೆ. ಹಾಗಾಗಿ ಪ್ರತಿಯೊಬ್ಬರ ಜೀವನದಲ್ಲೂ ಆಲಿಸುವಿಕೆಯ ಪಾತ್ರ ಮಹತ್ತರವಾದುದು.

ಶಿಕ್ಷಣದಲ್ಲಿ ಆಲಿಸುವ ಕ್ರಿಯೆಯಿಂದ ಮಕ್ಕಳು ಹೆಚ್ಚು ಕಲಿಯುತ್ತಾರೆ. ಬಹಳಷ್ಟು ಮಕ್ಕಳು ಈ ಕೌಶಲದಲ್ಲಿ ಸೂಕ್ತ ತರಬೇತಿ ಇಲ್ಲದೆ ಸಮರ್ಪಕವಾಗಿ ಆಲಿಸಲು ಅಸಮರ್ಥರಾಗುತ್ತಾರೆ. ಇದರ ಬಗ್ಗೆ ಶಿಕ್ಷಕರು, ಪೋಷಕರು ಹೆಚ್ಚು ಗಮನ ಕೊಡಬೇಕು. ಆದುದರಿಂದ ಪ್ರಾಥಮಿಕ ಹಂತದಲ್ಲಿಯೇ ಮಕ್ಕಳಲ್ಲಿ ಉತ್ತಮವಾದ ಆಲಿಸುವ ಕೌಶಲವನ್ನು ಬೆಳೆಸಲು ಗಮನಹರಿಸಬೇಕು. ಇದು ಇತರೆಲ್ಲಾ ಭಾಷಾ

ಕೌಶಲಗಳ ತಳಹದಿ. ಉಳಿದೆಲ್ಲಾ ಕೌಶಲಗಳ ಬೆಳವಣಿಗೆಗೆ ಸಹಕಾರಿ.

ಈ ನಾಟಕಕಲೆಯಲ್ಲಿ ಆನಂದಾಂಶದಂತೆಯೇ ಬೋಧಾಂಶವೂ ಹದವಾಗಿ ಕಾಣುತ್ತದೆ. ಶಿಕ್ಷಣ, ಮಾಹಿತಿ, ಮನರಂಜನೆಯ ಜೊತೆ ನಾಟಕಕಲೆ ಪ್ರಾಚೀನ ಕಾಲದಿಂದ ಪ್ರಸ್ತುತದ ವರೆಗೂ ಅನೇಕ ಬದಲಾವಣೆಗಳಿಗೆ ಒಳಪಟ್ಟು ತನ್ನ ಅಸ್ತಿತ್ವವನ್ನು ಉಳಿಸಿಕೊಂಡು ಬೆಳೆದು ಬಂದಿದೆ. ಬ. ಶಿವಮೂರ್ತಿಶಾಸ್ತ್ರಿಗಳು "ಪ್ರಪಂಚದ ಯಾವ ಸಾಹಿತ್ಯದಲ್ಲಿ ನೋಡಿದರೂ ನಾಟಕಗಳಿಗೆ ಅಗ್ರಸ್ಥಾನವಿದೆ, ವಿದ್ಯಾರ್ಥಿಗಳಿಗೆ ನಾಟಕಗಳ ಪಾಠವಾಗಬೇಕು" ಎಂಬ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಶಾಲಾ ಶಿಕ್ಷಣದ ಭಾಷಾ ಪಠ್ಯಗಳಲ್ಲಿ ನಾಟಕ ಸಾಹಿತ್ಯವನ್ನು ಅಳವಡಿಸಿಕೊಂಡು, ಮಕ್ಕಳಲ್ಲಿ ನಾಟಕ ಕಲೆಯ ಬಗ್ಗೆ ಅಭಿರುಚಿ ಬೆಳೆಯುವಂತೆ ಮಾಡುತ್ತಿರುವುದು ಪ್ರಸಂಶೆಯ ವಿಷಯ; ಆದರೆ ನಾಟಕ ಪ್ರಯೋಗಗಳಲ್ಲಿ ಹೆಚ್ಚು ಕೆಲಸವಾಗಬೇಕಾಗಿದೆ. ಶಾಲೆಗಳಲ್ಲಿ ರೇಡಿಯೋ ಪಾಠಗಳನ್ನು ಕೇಳಿಸುತ್ತಿದ್ದರು, ಪ್ರಸ್ತುತ ಈ ಚಟುವಟಿಕೆ ಬಹುತೇಕ ಶಾಲೆಗಳಲ್ಲಿ ನಡೆಯುತ್ತಿಲ್ಲ; ಮುಂದುವರಿಸುವುದು ಅಗತ್ಯ. ಅದರ ಜೊತೆ ಮಕ್ಕಳ ನಾಟಕಗಳನ್ನು ಧ್ವನಿ ಮುದ್ರಿಸಿ ರೇಡಿಯೋಗಳಲ್ಲಿ ಪ್ರಸಾರಮಾಡಿಸಬೇಕು. ಇದರಿಂದ ಮಕ್ಕಳ ಆಲಿಸುವ ಸಾಮರ್ಥ್ಯ ವೃದ್ಧಿಯಾಗುತ್ತದೆ.

**ಆಲಿಸುವ ಕೌಶಲವರ್ಧನೆಯಲ್ಲಿ ಯೋಜಿಸಬಹುದಾದ ನಾಟಕಕಲೆಯ ಚಟುವಟಿಕೆಗಳು:**

ಆಲಿಸುವ ಕೌಶಲವರ್ಧನೆಯಲ್ಲಿ ನಾಟಕಕಲೆಯನ್ನು ಹೇಗೆ ಅಳವಡಿಸಿಕೊಳ್ಳಬಹುದೆಂದು ಈ ಮುಂದಿನಂತೆ ತಿಳಿಯಬಹುದು. ನಮ್ಮ ರಂಗಮಂದಿರಗಳು ಆಲಿಸುವ ಕೌಶಲವನ್ನು ವೃದ್ಧಿಸಲು ಕಟ್ಟಿಸಿದಂತಿವೆ. ಪ್ರೇಕ್ಷಕರು, ರಂಗಮಂದಿರದ ಒಳಗೆ ಬಂದಾಗ ಮೌನವಹಿಸುತ್ತಾರೆ. ಕಾರಣ ಒಳಗಡೆ ನಡೆಯುವ ವಿಷಯಗಳಿಗೆ ಕಿವಿಯಾಗಲು. ಅದೇ ರೀತಿ ಶಾಲೆಯಲ್ಲಿ ಶಿಕ್ಷಕರು ರಂಗಮಂದಿರಂದತೆ ತಮ್ಮ ಬೋಧನಾ ಕೊಠಡಿಯನ್ನು ಸಿದ್ಧಪಡಿಸಿಕೊಳ್ಳಬೇಕು. ನವ ತಂತ್ರಜ್ಞಾನದ ಶ್ರವಣ ಸಾಧನಗಳನ್ನು ಬಳಸಿಕೊಳ್ಳಬೇಕು. ಆಗ ಮಕ್ಕಳು ಆಲಿಸುವಿಕೆಗೆ ಹೆಚ್ಚಿನ ಗಮನ ಕೊಡಬಹುದು.

ನಾಟ್ಯಶಾಸ್ತ್ರದಲ್ಲಿ ತಿಳಿಸಿರುವಂತೆ, "ನಾಟಕ ಪ್ರಯೋಗ ಪ್ರದರ್ಶನದ ಪ್ರಾರಂಭಕ್ಕೆ ಎಲ್ಲಾ ವಾದ್ಯಗಳನ್ನು ಬಾರಿಸುವುದು." ಈ ಶಬ್ಧ ಸಂಕೇತ ಪ್ರೇಕ್ಷಕರನ್ನು ನಾಟಕ ನೋಡಲು ಅಣಿಗೊಳಿಸುತ್ತದೆ. ಅದರಂತೆ ಶಾಲೆಯಲ್ಲಿ ಮಕ್ಕಳು ಗಂಟೆಯ ಶಬ್ಧ ಸಂಕೇತಕ್ಕೆ ಹೆಚ್ಚು ಅವಲಂಬಿತರಾಗಿರುತ್ತಾರೆ. ಪ್ರಾರಂಭದ ಜೊತೆ ಅವಧಿಗಳ ಮಧ್ಯೆ, ಮತ್ತು ಆ ದಿನದ ಶಾಲೆಯ ಮುಕ್ತಾಯಕ್ಕೆ ಗಂಟೆ ಶಬ್ಧದ ಸಂಕೇತ ಹೆಚ್ಚು

ಪರಿಣಾಮಕಾರಿಯಾಗಿರುತ್ತದೆ. ಹಾಗಾಗಿ ಶಾಲೆಯಲ್ಲಿ ಅವಧಿಗಳ ಮಧ್ಯೆ ಇರುವ ವಿರಾಮ ಸಮಯವನ್ನು ಧ್ವನಿವರ್ಧಕದ ಮೂಲಕ ವಿವಿಧ ಶಬ್ಧಗಳನ್ನು ಮಕ್ಕಳಿಗೆ ಕೇಳಿಸಿದರೆ ಆಲಿಸುವಿಕೆ ಹೆಚ್ಚು ಪರಿಣಾಮಕಾರಿಯಾಗಿರುತ್ತದೆ.

ದೇಹದ ಸ್ವಸ್ಥ ಸ್ಥಿತಿ ಮತ್ತು ಚಲನಶೀಲತೆಯಿಲ್ಲದೆ, ಮನಸ್ಸಿನ ಕ್ರಿಯಾಶೀಲತೆಯೂ ಅಸಾಧ್ಯ. ಹಾಗಾಗಿ ಮಕ್ಕಳ ಏಕಾಗ್ರತೆಯನ್ನು ಹೆಚ್ಚಿಸಲು ಧ್ಯಾನ, ಕ್ರಿಯಾತ್ಮಕ ವ್ಯಾಯಾಮ, ಸರಳ ಯೋಗಾಸನಗಳನ್ನು ನಿರಂತರವಾಗಿ ಅಭ್ಯಾಸ ಮಾಡಿಸುವುದು. ನಮ್ಮ ಜನಪದ ನೃತ್ಯಗಳಾದ ಕೋಲಾಟ, ಕಂಸಾಳೆ, ವೀರಗಾಸೆ, ಯಕ್ಷಗಾನ, ಪಟಕುಣಿತ, ಡೊಳ್ಳುಕುಣಿತ, ರಂಗದ ಹೆಜ್ಜೆ, ಮರಗಾಲು ಕುಣಿತ, ತಮಟೆಕುಣಿತ ಇತ್ಯಾದಿ ನೃತ್ಯಗಳನ್ನು ಕಲಿಸುವುದು. ಮತ್ತು ಬೇರೆ–ಬೇರೆ ರಂಗ ಪ್ರಕಾರಗಳಲ್ಲಿ ಬಳಕೆಯಾಗುವ ಕಥಕ್ಕಳಿ, ಕೂಡಿಯಾಟಂ, ಭರತನಾಟ್ಯ ಇತ್ಯಾದಿ ಶಾಸ್ತ್ರೀಯ ನೃತ್ಯಗಳ ಭಂಗಿಗಳನ್ನು ಅಭ್ಯಾಸ ಮಾಡಿಸುವುದು. ರಂಗ ಕ್ರೀಡೆಗಳನ್ನು ಆಡಿಸುವುದು. ಈ ಚಟುವಟಿಕೆಗಳನ್ನು ರಂಗಶಿಕ್ಷಕರು, ತಜ್ಞರು, ನಿರ್ದೇಶಕರು, ಕಲಾವಿದರು, ತರಬೇತಿದಾರರ ಮಾರ್ಗದರ್ಶನದಲ್ಲಿ ಅಭ್ಯಾಸ ಮಾಡಿಸುವುದು ಉತ್ತಮ, ಆಗ ಮಕ್ಕಳಲ್ಲಿ ಏಕಾಗ್ರತೆ ಹೆಚ್ಚಾಗಬಹುದು.

ಉದಾಹರಣೆಗೆ ಕನ್ನಡಿ ಆಟ, ಇಬ್ಬರು ವಿದ್ಯಾರ್ಥಿಗಳು ಪರಸ್ಪರ ಚಲನೆಗಳನ್ನು ಕನ್ನಡಿಯಂತೆ ಪುನರಾವರ್ತಿಸುವ ಅಭ್ಯಾಸ. ಮುಂದುವರೆದಂತೆ ವಿದ್ಯಾರ್ಥಿಗಳ ಗುಂಪಿಗೂ ವಿಸ್ತರಿಸಬಹುದು. ಈ ಆಟದಲ್ಲಿ ದೈಹಿಕ ಚಟುವಟಿಕೆ ದೇಹಕ್ಕೆ ಶಕ್ತಿ ಕೊಟ್ಟರೆ, ಬೌದ್ಧಿಕ ಚಟುವಟಿಕೆ ಮನಸ್ಸಿಗೆ ಶಕ್ತಿ, ಉತ್ಸಾಹ ಚೈತನ್ಯ ನೀಡುತ್ತದೆ. ನಂತರ ಆಲಿಸುವ ಕಾರ್ಯ ಕೈಗೊಳ್ಳಬಹುದು.

ಪದಚಿತ್ರ ಧ್ವನಿ ಚಟುವಟಿಕೆ, ಕೈಗೊಳ್ಳುವ ವಿಧಾನ: ತರಗತಿಯ ಎಲ್ಲಾ ವಿದ್ಯಾರ್ಥಿಗಳಿಗೆ, ನೀವು ಆಯ್ದುಕೊಂಡ ವಿಷಯದಲ್ಲಿರುವ ಪದಗಳಿಗೆ ಸಂಬಂಧಿಸಿದ ಕಲ್ಪಿತ ಚಿತ್ರಪಟಗಳನ್ನು ತೋರಿಸುವುದು. ನಂತರ ಅದರಲ್ಲಿ ಬಂದಿರುವ ಚಿತ್ರಗಳನ್ನು ಹೆಸರಿಸಲು ಹೇಳುವುದು ಮತ್ತು ಬರೆಸುವುದು. ಆನಂತರ ಒಮ್ಮೆ ಮುದ್ರಿತ ಧ್ವನಿಯನ್ನು ಕೇಳಿಸಿ, ಮುಂದುವರಿದು ವಿದ್ಯಾರ್ಥಿಗಳಿಂದ ಭಾವಪೂರ್ಣವಾಗಿ ಓದಿಸಿ, ಅಥವಾ ಮುದ್ರಿತ ಧ್ವನಿಯನ್ನು ಕೇಳಿಸಿ, ಈ ಕ್ರಿಯೆ ನಡೆಯುವಾಗಲೆ, ಸೂಕ್ತವಾಗುವ ಪದಚಿತ್ರಗಳನ್ನು, ವಿದ್ಯಾರ್ಥಿಗಳು/ಶಿಕ್ಷಕರು ತರಗತಿಯಲ್ಲಿ ಉಳಿದ ವಿದ್ಯಾರ್ಥಿಗಳಿಗೆ ತೋರಿಸುತ್ತಿರಬೇಕು. ಆಗ ವಿದ್ಯಾರ್ಥಿಗಳು ಚೆನ್ನಾಗಿ ಆಲಿಸಿರುತ್ತಾರೆ ಜೊತೆಗೆ ಗ್ರಹಿಸುತ್ತಾರೆ.

ಆಲಿಸುವ ಕೌಶಲವರ್ಧನೆಗೆ ಶಿಕ್ಷಕರು ಕೈಗೊಳ್ಳಬಹುದಾದ ಇನ್ನೊಂದು

ಚಟುವಟಿಕೆ ಈ ಮುಂದಿನಂತೆ ತಿಳಿಯಬಹುದು. ತರಗತಿಯ ಎಲ್ಲಾ ವಿದ್ಯಾರ್ಥಿಗಳನ್ನು ವೃತ್ತಾಕಾರವಾಗಿ ಕುಳ್ಳಿರಿಸಿ, ಶಿಕ್ಷಕರು, ವೃತ್ತದ ಒಂದು ಭಾಗದಲ್ಲಿ ನಿಂತುಕೊಳ್ಳುವುದು. ಅವರ ಮುಂದೆ ಸಿದ್ಧಪಡಿಸಿದ ಕಾಲ್ಪನಿಕ ಜಾದು ಧ್ವನಿ ಪೆಟ್ಟಿಗೆಯನ್ನು ಇಟ್ಟುಕೊಂಡು, ವಿದ್ಯಾರ್ಥಿಯನ್ನು ಕರೆದು ಪೆಟ್ಟಿಗೆಯಲ್ಲಿರುವ ವಸ್ತುವನ್ನು ತೆಗೆಯಲು ಹೇಳುವುದು. ತೆಗೆದ ತಕ್ಷಣ, ಆ ವಸ್ತುವಿನ ವಿವರಣೆ ಮುದ್ರಿತ ಧ್ವನಿಯಲ್ಲಿ ಕೇಳುತ್ತಿರಬೇಕು. ಆಗ ತರಗತಿಯ ಎಲ್ಲಾ ಮಕ್ಕಳು ಆಶ್ಚರ್ಯವಾಗಿ ಆಲಿಸಬಹುದು. ಇದರಿಂದ ಮಕ್ಕಳಲ್ಲಿ ಆಲಿಸುವ ವಿಷಯದಲ್ಲಿ ಕುತೂಹಲ ಮೂಡಿ, ಕಲ್ಪನಾಶಕ್ತಿ ವೃದ್ಧಿಯಾಗಬಹುದು.

ಶಿಕ್ಷಕರು, ಮಕ್ಕಳ ಕಲ್ಪನಾಶಕ್ತಿಗೆ ಪ್ರಚೋದಕವಾಗುವಂತಹ ಮನೋ ಚಿತ್ರಗಳನ್ನು ನಿರ್ಮಿಸುವ ಸಲುವಾಗಿ ಹೊಸ ಹೊಸ ವಸ್ತು–ವಿಷಯಗಳನ್ನು ಬಳಸಿಕೊಳ್ಳಬೇಕು. ಉದಾಹರಣೆಗೆ ಪ್ರಯಾಣ ಪ್ರಸಂಗಗಳು ಎತ್ತಿನ ಗಾಡಿ, ಮೋಟಾರು, ರೈಲು, ಏರೋಪ್ಲೇನು, ನಿಸರ್ಗ ಚಿತ್ರಣ– ಜ್ವಾಲಾಮುಖಿ, ಸಿಡಿಲು, ಗುಡುಗು, ಮಳೆ ಮಹಾಪೂರ ಬಿರುಗಾಳಿ, ಭೂಕಂಪ ಇತ್ಯಾದಿ ಶಬ್ಧಗಳನ್ನು ಧ್ವನಿ ಮುದ್ರಿಸಿ, ಕೇಳಿಸುವುದು. ಹಾಗೂ ಪೌರಾಣಿಕ, ಐತಿಹಾಸಿಕ ಇಲ್ಲವೆ ಸಮರದ ಸನ್ನಿವೇಶಗಳು, ಕನಸು, ಪವಾಡಗಳ ಚಿತ್ರಣ, ಜನಜೀವನ, ಕುಟುಂಬ ಜೀವನ ಅಥ ವಾ ವ್ಯಕ್ತಿ ಜೀವನದ ಘಟನೆಯೊಂದನ್ನು ಅವಲಂಬಿಸಿದ ಚಿತ್ರಣದ ತುಣುಕುಗಳನ್ನು ಕೇಳಿಸುವುದು.

ಶಿಕ್ಷಕರಿಗೆ ದೊರಕಬಹುದಾದ ತಂತ್ರೋಪಕರಣಗಳನ್ನು ಬಳಸಿಕೊಂಡು ಮಕ್ಕಳ ಅನೌಪಚಾರಿಕ ಮಾತುಕತೆಯನ್ನು ಧ್ವನಿ ಮುದ್ರಿಸಿ ಕೇಳಿಸುವುದು. ಉದಾಹರಣೆಗೆ, ಗೆಳೆಯರು ಆಟವಾಡುವ ಸಂದರ್ಭದಲ್ಲಿನ ಮಾತುಕತೆ. ಜಾತ್ರೆಗೆ ಹೋಗಿ ಬಂದ ಸಂದರ್ಭವನ್ನು ಗೆಳತಿಗೆ ಹಂಚಿಕೊಳ್ಳುವ ಮಾತುಕತೆ. ಪೋಷಕರ ಜೊತೆ ಪ್ರವಾಸಕ್ಕೆಗೊಂಡಿದ್ದರ ಬಗ್ಗೆ ಗೆಳಯರಿಗೆ ಹೇಳುವ, ಇತ್ಯಾದಿ

ಆಲಿಸುವ ನಾಟಕಗಳಲ್ಲಿ ನಾಟಕ ಸಾಹಿತ್ಯ ಕೃತಿ, ರಂಗ ಕೃತಿಯಾದಾಗ ಅದರಲ್ಲಿ ಅಭಿನಯ ಮಾತಿನಲ್ಲಿ ವ್ಯಕ್ತವಾಗುತ್ತದೆ. ಅಂದರೆ ಧ್ವನಿಯ ಏರಿಳಿತ, ವಿವಿಧ ಭಾವಗಳು, ಉಚ್ಚಾರ, ಒತ್ತು, ಸ್ವರಭಾರ, ವಿವಿಧ ವಿಚಾರಗಳ ನಡುವಿನ ಪರಸ್ಪರ ಸಂಬಂಧ, ಮಾತನಾಡುವ ಮನಸ್ಥಿತಿ, ಕೇಂದ್ರಾಭಿಪ್ರಾಯವನ್ನು ಗಮನಿಸಬಹುದು. ಒಂದು ನಿರ್ದಿಷ್ಟ ಸಂದರ್ಭದಲ್ಲಿ ಪ್ರಯೋಗವಾದ ಮಾತಿನ ಚಮತ್ಕಾರಗಳನ್ನು ತಿಳಿಸುವ ದ್ವಿರುಕ್ತಿ, ಅನುಕರಣಾವ್ಯಯ, ಜೋಡುನುಡಿ, ಮಾತಿಗೊಂದು ಗೀತು, ಪಡೆನುಡಿಗಳು, ನುಡಿಗಟ್ಟುಗಳು, ಗಾದೆಮಾತುಗಳನ್ನು ಕೂಡ ಗಮನಿಸಬಹುದು. ಒಂದೇ ಬಾರಿಗೆ ಕೇಳಿದಾಗ ತಿಳಿಯದೇ ಇರಬಹುದು. ಆದರೆ ಪುನಃ–ಪುನಃ

ಕೇಳಿದರೆ ಮೇಲಿನಾಂಶಗಳನ್ನು ಗುರುತಿಸಬಹುದು. ಹಾಗೂ ಮಕ್ಕಳ ನಾಲಿಗೆಯ ತೊಡಕುಗಳನ್ನು ನಿವಾರಿಸಬಹುದು.

ನಾಟಕಗಳಲ್ಲಿ ಬಂದಿರುವ ಚರ್ಚೆಯ ಭಾಗ, ನಿರೂಪಣೆಯ ಭಾಗ, ಸ್ವಾನುಭವದ ಸ್ವಗತಗಳ ಭಾಗಗಳನ್ನು ಗುರುತಿಸಿಕೊಂಡು ಧ್ವನಿ ಮುದ್ರಿಸಿ ಕೇಳಿಸಿ. ವಿವಿಧ ಪಾತ್ರಗಳ ಮಾತಿನ ಶೈಲಿ, ರೀತಿ, ಶಬ್ದೋಚ್ಚಾರಣ ಕ್ರಮ, ಶಬ್ಧ ಪ್ರಯೋಗದ ರೀತಿ ಗುರುತಿಸಲು ಪದೇ ಪದೇ ಕೇಳಿಸಿ, ತಿಳಿಸುವುದು. ಒಂದು ವೇಳೆ ಮಕ್ಕಳನ್ನೇ ಬಳಸಿಕೊಂಡು ಧ್ವನಿ ಮುದ್ರಿಸಿದರೆ, ಅವರಿಗೆ ಮೊದಲೇ ಧ್ವನ್ಯಂಗ ತರಬೇತಿ ನೀಡಿ, ಉಚ್ಚಾರಕ್ರಮ, ಭಾವಾಭಿನಯದ ತರಬೇತಿಯನ್ನು ನೀಡಿರಬೇಕು.

ಒಂದು ನಾಟಕ ತಂಡ, ನಾಟಕ ಸಾಹಿತ್ಯ ಕೃತಿಯನ್ನು ಆಯ್ದುಕೊಂಡ ಮೇಲೆ, ಅದನ್ನು ನಿರ್ದೇಶಕರ ಮಾರ್ಗದರ್ಶನದಲ್ಲಿ ವಿವಿಧ ರೀತಿಯಲ್ಲಿ ಓದುತ್ತಾರೆ. ಇದರಿಂದ ತಂಡದ ಎಲ್ಲಾ ಸದಸ್ಯರ ಆಲಿಸುವಿಕೆಯ ಸಾಮರ್ಥ್ಯ ಹೆಚ್ಚಾಗುತ್ತದೆ. ಶಿಕ್ಷಕರು, ತರಗತಿಯಲ್ಲಿ ಈ ಪ್ರಕ್ರಿಯೆಯನ್ನು ಪ್ರಯೋಗಿಸಬಹುದು. ಒಂದು ಪಠ್ಯದ ವಿಷಯವನ್ನು ಅಯ್ದುಕೊಂಡು ಆ ವಿಷಯವನ್ನು ವಿವಿಧ ರೀತಿಯ ವಾಚನ ಶೈಲಿಯಲ್ಲಿ ಓದುವುದು. ಈ ಕ್ರಿಯೆ ನಡೆಯುವಾಗ ಶಿಕ್ಷಕರು, ಮಕ್ಕಳಿಗೆ ಆಲಿಸಿದ ಪದ, ಆ ಪದವನ್ನು ಉಚ್ಚರಿಸುವ ರೀತಿ, ಪದವನ್ನು ಬಳಸುವ ಸಂದರ್ಭ, ಪದಗಳ ಸಮುಚ್ಚಯದಿಂದ ವಾಕ್ಯಗಳಾಗಿ ರೂಪುಗೊಂಡಾಗ ಹೇಗಿರುತ್ತದೆ. ಎಂಬುದನ್ನು ಗ್ರಹಿಸಲು ಸೂಚಿಸುವುದು. ಇದರಿಂದ ಮಕ್ಕಳ ಆಲಿಸುವಿಕೆಯ ಸಾಮರ್ಥ್ಯ ತೀಕ್ಷ್ಣಗೊಳ್ಳುತ್ತದೆ.

ತಾಳ ಮದ್ದಳೆಯ ಕಥಾ ಪ್ರಸಂಗಗಳನ್ನು ಮಕ್ಕಳಿಗೆ ಕೇಳಿಸಬೇಕು. ಮತ್ತು ಪಠ್ಯದಲ್ಲಿ ಬರುವ ಕಥಾಭಾಗಗಳನ್ನು ತಾಳ ಮದ್ದಳೆಯ ಕಲಾವಿದರ ಸಹಾಯದಿಂದ ಧ್ವನಿ ಮುದ್ರಿಸಿ ಕೇಳಿಸಿದರೆ, ಮಕ್ಕಳು ರಸಭರಿತವಾಗಿ ಆಲಿಸಬಹುದು.

ರಂಗದಲ್ಲಿ ಮಾಡಿ ತೋರಿಸುವುದನ್ನೆಲ್ಲ ಬಾನುಲಿ ನಾಟಕಗಳಲ್ಲಿ ಆಡಿ ತೋರಿಸುತ್ತಾರೆ. ಹಾಗಾಗಿ ಪ್ರದರ್ಶಿಸಲಾಗದ ಘಟನೆಗಳಾದ ಜಾತ್ರೆ, ಜನಸಂದಣಿ, ಕಾಳಗ, ಕದನ, ಸಭೆ–ಸಮಾರಂಭ, ಮೆರವಣಿಗೆ, ಉತ್ಸವ ಇತ್ಯಾದಿಗಳನ್ನು ಶಬ್ಧ ಸಂಕೇತಗಳ ಮೂಲಕ ಕೇಳಿಸುತ್ತಾರೆ. ಇದರಿಂದ ಮಕ್ಕಳ ಮನಸ್ಸಿನಲ್ಲಿ ಚಿತ್ರದ ಕಲ್ಪನೆ ಮೂಡುವುದು. ಹಾಗೂ ಮಾತಿನಲ್ಲಿ ಬರುವ ವ್ಯಕ್ತಿ, ವಸ್ತುಗಳ ಗಾತ್ರ, ಬಣ್ಣ, ಸ್ವರೂಪ, ಕ್ರಿಯೆ ಎಲ್ಲವನ್ನೂ ಸೂಕ್ತ ವಿಶೇಷಣ ಪದಗಳ ಮೂಲಕ ಭಾವಪೂರ್ಣವಾಗಿ ವ್ಯಕ್ತವಾಗುತ್ತಿರುತ್ತದೆ. ಈ ತರಹದ ಬಾನೂಲಿ ನಾಟಕಗಳನ್ನು ಸತತವಾಗಿ ಆಲಿಸಿದರೆ, ಮಕ್ಕಳಲ್ಲಿ ಆಲಿಸುವ ಸಾಮರ್ಥ್ಯ ಹೆಚ್ಚಾಗಿ, ಶಬ್ಧಕೋಶ, ನಿರೂಪಣಾ ಕೌಶಲ

ಸಾಕಷ್ಟು ವ್ಯಾಪಕವಾಗಿ ವೃದ್ಧಿಯಾಗಬಹುದು.

**ಉಪಸಂಹಾರ:**

ನಾಟಕ ಕಲೆ ಪ್ರತಿಭಾ ಪ್ರಧಾನವಾದದ್ದು. ಆದ್ದರಿಂದ ಮಕ್ಕಳ ವಿದ್ಯಾಭ್ಯಾಸದ ಜೊತೆ ಇಂಥಹ ಕಲೆಯ ಕಲಿಕೆಯಾದರೆ, ನಮ್ಮ ಶಿಕ್ಷಣದಲ್ಲಿ ಬದಲಾವಣೆಗಳನ್ನು ಕಾಣಬಹುದು. ಈ ಆಲಿಸುವ ಕೌಶಲವರ್ಧನೆಯಲ್ಲಿ ನಾಟಕಕಲೆಯ ವಿವಿಧ ಆಯಾಮಗಳು ಸಹಾಯಕ್ಕೆ ಬರುತ್ತವೆ ಎಂದು ತಿಳಿಯಬಹುದು.

**ಪರಾಮರ್ಶನ ಗ್ರಂಥಗಳು:**


1. ಗಣೇಶ ಆರ್. (1998). ಕನ್ನಡದಲ್ಲಿ ಅವಧಾನ ಕಲೆ. ಕರ್ನಾಟಕ ಸಂಘ. ಪುತ್ತೂರು.
2. ನಾರಾಯಣ ಕೆ. ವಿ. (ಸಂ). (2019). ಭಾಷೆ. ಕನ್ನಡ ವಿಶ್ವವಿದ್ಯಾಲಯ. ಹಂಪಿ.
3. ಕೀರ್ತಿನಾಥ ಕುರ್ತಕೋಟಿ. (1985). ವಿಮರ್ಶೆಯ ವಿನಯ. ಮನೋಹರ ಗ್ರಂಥಮಾಲಾ. ಧಾರವಾಡ.
4. ಪ್ರಸನ್ನ. (1985). ನಾಟಕ ರಂಗಕೃತಿ. ಅಕ್ಷರ ಪ್ರಕಾಶನ. ಹೆಗ್ಗೋಡು.
5. ಅಕ್ಷರ ಕೆ. ವಿ. (2012). ರಂಗ ಪ್ರಯೋಗ. ಅಕ್ಷರ ಪ್ರಕಾಶನ. ಹೆಗ್ಗೋಡು.
6. ರಾಮನಾಥ ರಂಗಾಯಣ ಎಸ್. (2017). ಡ್ರಾಮಾ ಕ್ಲಬ್. ಯಶೋಮಾಧ್ಯಮ. ಮೈಸೂರು.
7. ಆದ್ಯರಂಗಾಚಾರ್ಯ (ಅನು). (2003). ನಾಟ್ಯಶಾಸ್ತ್ರ. ಅಕ್ಷರ ಪ್ರಕಾಶನ. ಹೆಗ್ಗೋಡು.
8. https://Youtu.be/6iDMuB6NjNA2



**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.



**About the License:**

© The Authors 2024. The text of this article is open access and licensed under a Creative Commons Attribution 4.0 International License.